<u>ದಿನಾಂಕ ಃ 10.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಗಿದೆ.</u>

**<u>ಮುಂದುವರೆದ ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ಎಂ. ರವರಿಂದ ಃ</u>**

1) ವರದಕ್ಷಿಣೆ ಕೊಡುವ ಬಗ್ಗೆ ನಿಗದಿ ಮಾಡಿದ ಮಧ್ಯಸ್ತಿಕೆದಾರರು,ವಡ್ಡರಹಳ್ಳಿ ಗ್ರಾಮದ ಮುಖಂಡರುಗಳಾದ ಸಿದ್ದಯ್ಯ, ನರಸಿಂಹಯ್ಯ ಮತ್ತು ಇತರರು ಹಾಗೂ ನಮ್ಮ ಕಡೆಯಿಂದ, ನಂಜಯ್ಯ ಮತ್ತು ನಮ್ಮ ಗ್ರಾಮದ ಎಲ್ಲಾ ಮುಖ್ಯಸ್ತರು. ಸದರಿ ಮಧ್ಯಸ್ತಿಕೆದಾರರು, ಮದುವೆ ಮಾಡಿಕೊಡುವಂತೆ, ಉಂಗುರವನ್ನು ಕೊಡುವಂತೆ ಮತ್ತು ಒಂದು ಲಕ್ಷ ಹಣವನ್ನು ಕೊಡಬೇಕು ಎಂದು ತೀರ್ಮಾನ ಮಾಡಿದ್ದರು. ಸದರಿ ಮಾತುಕತೆಯಾದಾಗ, ನನ್ನ ತಾಯಿ ಮತ್ತು ನನ್ನ ಮಗಳು ಇರಲಿಲ್ಲ ಎಂದರೆ ಸರಿಯಲ್ಲ. ಮದುವೆಯಾದ ಮೇಲೆ, ನನ್ನ ಮಗಳು ಗಂಡನ ಜೊತೆಯಲ್ಲಿ ಗಂಡನ ಮನೆಯಲ್ಲಿ, 4 ವರುಷ ಅನ್ಯೋನ್ಯವಾಗಿ 1st class ಆಗಿ ಇದ್ದರು. ಈ 4 ವರುಷ ಅವಧಿಯಲ್ಲಿ, ನಾನು ಬಾಕಿ ಉಳಿಸಿಕೊಂಡಿದ್ದ ವರದಕ್ಷಿಣೆಯನ್ನು ಕೊಡುವುದಕ್ಕೆ ಆಗಲಿಲ್ಲ, ತೊಂದರೆ ಇತ್ತು, ಆದ್ದರಿಂದ ಪ್ರಯತ್ನ ಮಾಡಲಿಲ್ಲ. ಆರೋಪಿಗಳು, ಬಾಕಿ ಉಳಿಸಿಕೊಂಡಿದ್ದ ವರದಕ್ಷಿಣೆಯನ್ನು ಕೊಡುವಂತೆ ಕೇಳಿದ್ದರು. ಆಗ ನನಗೆ, ಸ್ವಲ್ಪ ಕಷ್ಟ ಇದ್ದಿದ್ದರಿಂದ ಅದನ್ನು ಕೊಡಲು ಆಗಿರಲಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನನ್ನ ಮಗಳು ಸಾಯುವ ಸ್ವಲ್ಪ ದಿನಗಳ ಮುಂಚೆ, ನನ್ನ ಹೆಂಡತಿ ಮತ್ತು ನನ್ನ ಮಗ, 50 ಸಾವಿರ ರೂ. ನಗದು ಹಣವನ್ನು ತೆಗೆದುಕೊಂಡು ಹೋಗಿ ಆರೋಪಿಗಳಿಗೆ ಕೊಟ್ಟಿದ್ದರು. ಆಗ 1 ನೇ ಆರೋಪಿ - ನನ್ನ ಅಳಿಯ, ಮಳವಳ್ಳಿ ನಲ್ಲಿ ಕಂಪ್ಯೂಟರ್ ಆಪರೇಟರ್ ಕೆಲಸ ಮಾಡುತ್ತಿದುದ್ದರಿಂದ, ಕೆಲಸಕ್ಕೆ ಮಳವಳ್ಳಿಗೆ ಮತ್ತು ವಡ್ಡರಹಳ್ಳಿಗೆ ಹೋಗಿ ಬಂದು ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ.

2) 2 ನೇ ಆರೋಪಿ ನನ್ನ ಮಗಳಿಗೆ, ನನ್ನ ಎದುರಿಗೆ, ಬೈಯ್ಯುವುದನ್ನು ಮಾಡಿರಲಿಲ್ಲ ಎಂದರೆ ಸರಿ. 2 ನೇ ಆರೋಪಿ, ನನ್ನ ಮಗಳಿಗೆ, '' 2 ನೇ ಮಗು ಹುಟ್ಟಿದ ಮೇಲೆ, 2 ನೇ ಆರೋಪಿ ಹೊನ್ನಯ್ಯ, ಆಯಿಕೊಂಡು ತಿನ್ನೊ ಲೋಫರ್ ಮನೆಯಲ್ಲಿ ಹೆಣ್ಣು ತಂದೆ, ಉಣ್ಣುಕೋ ತಿಂದುಕೊಂಡು ಅಂಡು ಬೆಳೆಸಿಕೊಡು ಮನೆಯಲ್ಲಿ ಕುಳಿತಿದ್ದಾಳೆ, ಸೌದೆ ಆಯುವುದಕ್ಕೆ ಹೋಗುವುದಿಲ್ಲ, ಹೊಲಕ್ಕೆ ಬರುವುದಿಲ್ಲ'' ಎಂದು ನನ್ನ ಎದುರಿಗೆ ಬೈದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಹೇಳುತ್ತಾರೆ, ನನ್ನ ಮಗಳು, ಅವಳಿಗೆ, ಈಗೆ ಬೈದಿದ್ದ ವಿಚಾರವನ್ನು ನನಗೆ ಹೇಳಿದ್ದಳು ಎಂದು. ನನ್ನ ಮಗಳು ಮದವೆಯಾದಾಗಿನಿಂದಲೂ ದಿನಾಲು ನಮ್ಮ ಜೊತೆ ಫೋನ್ ನಲ್ಲಿ ಮಾತನಾಡುತ್ತಿದ್ದಳು ಎಂದರೆ ಸರಿ. ನನ್ನ ಅಳಿಯ 1 ನೇ ಆರೋಪಿಯು ಸಹ,

ಫೋನ್ ನಲ್ಲಿ ಚೆನ್ನಾಗಿ ಮಾತನಾಡುತ್ತಿದ್ದನು. 1 ನೇ ಆರೋಪಿ, ನನ್ನ ಮಗಳೊಂದಿಗೆ, ನಿಮ್ಮ ತಂದೆ, ಬ್ರಾಸ್ಲೈಟ್ ನ್ನು ಮಾಡಿಸಿಕೊಟ್ಟಿಲ್ಲ ಎಂದು ಪ್ರಶ್ನಿಸಿದ್ದಾಗ, ಅದನ್ನು ನನ್ನ ಮಗಳು, ನನಗೆ ಫೊನ್ ನಲ್ಲಿ ತಿಳಿಸಿದ್ದಳು, ಆಗ ನಾನು 1 ನೇ ಆರೋಪಿಗೆ, ಯಾಕೆ ನನ್ನ ಮಗಳಿಗೆ, ಈ ರೀತಿ ಡಿಮ್ಯಾಂಡ್ ಮಾಡುತ್ತಿದ್ದಿರಾ ಎಂದು ನೀವು 1 ನೇ ಆರೋಪಿಗೆ ಪ್ರಶ್ನಿಸಿದ್ದಿರಾ ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿಯು, ನಾನು ಇದನ್ನು ಕೇಳಲು ಆರೋಪಿ ಮನಗೆ ಬರುತ್ತೆನೆ ಎಂದು ಮಗಳಿಗೆ ತಿಳಿಸಿದಾಗ, ಮಗಳು, ನೀನು ಬಂದು ಈ ವಿಚಾರವನ್ನು 1 ನೇ ಆರೋಪಿಗೆ ಕೇಳಬೇಡ, ಕೇಳಿದರೆ, ಆರೋಪಿಗಳು, ನೀನು ಬಂದು ಹೋದ ಮೇಲೆ, ನನಗೆ ಹೊಡೆದು ಹಿಂಸೆ ಕೊಡುತ್ತಾರೆ ಅಂತ ಹೇಳಿದಳು, ಆದ್ದರಿಂದ ನಾನು ಆರೋಪಿಗೆ ಈ ವಿಚಾರವನ್ನು ಕೇಳಲಿಲ್ಲ. ಬಾಕಿ ಉಳಿಸಿಕೊಂಡಿದ್ದ ವರದಕ್ಷಿಣೆಯನ್ನು ತಂದು ಕೊಡಬೇಕು ಅಂತ, 1 ನೇ ಆರೋಪಿ ನನಗೆ ನೇರವಾಗಿ ಕೇಳಿರಲಿಲ್ಲ. ನನ್ನ ಮಗ ಮತ್ತು ಹೆಂಡತಿ, 50 ಸಾವಿರ ದುಡ್ಡನ್ನು, 1 ನೇ ಆರೋಪಿ ಎದುರಿಗೆ, ನನ್ನ ಮಗಳಿಗೆ ಕೊಟ್ಟು, ಇನ್ನೂ ಸ್ವಲ್ಪ ಹಣವನ್ನು ಸೇರಿಸಿ, 1 ನೇ ಆರೋಪಿಗೆ ಬ್ರಾಸ್ಲೈಟ್ ನ್ನು ಮಾಡಿಸಿಕೊಡು ಅಂತ ಹೇಳಿದರು. 50 ಸಾವಿರ ದುಡ್ಡನ್ನು ಕೊಟ್ಟಾಗ, ಆರೋಪಿ ಮನೆಯಲ್ಲಿ, 1 ನೇ ಆರೋಪಿ, 2 ನೇ ಆರೋಪಿ, ನನ್ನ ಮಗಳು ಮತ್ತು ಇಬ್ಬರು ಮೊಮ್ಮಕ್ಕಳು ವಾಸ ಇದ್ದರು.

3) ನನ್ನ ಮಗಳು ಫೋನ್ ನಲ್ಲಿ ನನ್ನ ಜೊತೆ ಮಾತನಾಡುತ್ತಿದ್ದ ವಿಷಯವು, ಗೊತ್ತಾಗುವಂತೆ, 1 ನೇ ಆರೋಪಿ, ಅವನ ಮೊಬೈಲ್ ನಲ್ಲಿ ಸೆಟ್ ಮಾಡಿಕೊಂಡಿದ್ದನು ಎಂದು ನೀವು ಹೇಳುವ ವಿಚಾರವನ್ನು, ನಿಮಗೆ ಯಾರು ಹೇಳಿದ್ದರು ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿಯು, ನನ್ನ ಮಗಳು ಈ ವಿಚಾರವನ್ನು ಹೇಳಿದ್ದಳು ಎಂದು ನುಡಿಯುತ್ತಾರೆ. ಈ ವಿಚಾರವನ್ನು, ಮದುವೆ ಮಾಡಿಸಿದ ಮಧ್ಯಸ್ತಿಕೆದಾರರೊಬ್ಬರಾದ ನರಸಿಂಹಯ್ಯನಿಗೆ ತಿಳಿಸಿದ್ದೆನು, ಅವರು, 1 ನೇ ಆರೋಪಿಗೆ ಏನು ಬುದ್ದಿವಾದ ಹೇಳಲಿಲ್ಲ. ನನ್ನ ಮಗಳು ಸಾಯುವ 3 ದಿವಸಗಳ ಮುಂಚೆ, ನನಗೆ ಫೋನ್ ಮಾಡಿದಾಗ, ಆಗ ಮನೆಯಲ್ಲಿ, ನನ್ನ ಹೆಂಡತಿ, ನಾನು ಮತ್ತು ನನ್ನ ಮಗ ಇದ್ದೆವು. 1 ನೇ ಆರೋಪಿಗೆ, ನಾನು, ಯಾಕೆ ಪ್ರತಿನಿತ್ಯ, ನನ್ನ ಮಗಳ ಜೊತೆ ಗಲಾಟೆ ಮಾಡುತ್ತಿಯಾ ಅಂತ ಪ್ರಶ್ನಿಸಿದಾಗ, 1 ನೇ ಆರೋಪಿಯು, ಅವಳ ಮಾತನ್ನು ಕೇಳಬೇಡಿ ಮಾವ, ನೀವು ಬರಕ್ಕೆ ಹೋಗಬೇಡಿ ಅಂತ ಹೇಳಿದನು. ಆ ದಿವಸ ಮಧ್ಯಾಹ್ನ, ಮತ್ತೆ ನನ್ನ ಮಗಳು ನನಗೆ ಫೋನ್ ಮಾಡಿದಾಗ, ಯಾವ ಕಾರಣಕ್ಕೆ ಈ ದಿವಸ, ನಿನ್ನ ಗಂಡ, (1 ನೇ ಆರೋಪಿ) ಗಲಾಟೆ ಮಾಡುತ್ತಿದ್ದಾನೆ ಅಂತ ಕೇಳಿದಾಗ, ದುಡ್ಡು ಕೊಡಲಿಲ್ಲ, ಬ್ರಾಸ್ಲೈಟ್ ಕೊಡಲಿಲ್ಲ ಎಂದು ಕಪ್

ಕಪಾಳಕ್ಕೆ ಹೊಡೆದನು ಎಂದು ಮಗಳು ತಿಳಿಸಿದಳು. ಆಗ ನಾನು ಆರೋಪಿಗಳ ಮನೆಗೆ ಹೋಗುವುದಕ್ಕೆ, ಸ್ಕೂಟರ್ ತೆಗೆದುಕೊಂಡು ರೆಡಿಯಾಗಿದ್ದಾಗ, ನನ್ನ ಹೆಂಡತಿ ಮತ್ತು ಕಿರಿ ಮಗ ಬಂದು, ನೀನು ಹೋದರೆ ಜಗಳ ಮಾಡುತಿಯಾ, ನೀನು ಹೋಗಬೇಡ, ನಾವು ಹೋಗಿ ಕರೆದುಕೊಂಡುಹೋಗಿ ಬರುತ್ತೇವೆ ಅಂತ ನನ್ನನ್ನು ಹೋಗದಂತೆ ತಡೆದಿದ್ದರು. ನನ್ನ ಹೆಂಡತಿ ಮತ್ತು ಮಗಳ ಎದುರಿಗೆ, ನಾನು 1 ನೇ ಆರೋಪಿಯೊಂದಿಗೆ ಜಗಳ ಮಾಡಿಲ್ಲ. ನನ್ನ ಮಗಳು, 1 ನೇ ಆರೋಪಿಗೆ, 2 ನೇ ಆರೋಪಿಗೆ ಯಾವಾಲಗೂ ಅಡಿಗೆಯನ್ನು ಮಾಡಿಕೊಂಡು ಇರಲು ಆಗುವುದಿಲ್ಲ, 2 ನೇ ಆರೋಪಿ ಹೋಗಿ ಬೇರೆ ಕಡೆ ಪ್ರತ್ಯೇಕವಾಗಿ ಇರಲಿ ಎಂದು, 1 ನೇ ಆರೋಪಿಯೊಂದಿಗೆ ಯಾವಾಗಲೂ ಜಗಳ ಮಾಡುತ್ತಿದ್ದಳು ಎಂದರೆ ಸರಿಯಲ್ಲ. 1 ನೇ ಆರೋಪಿ, ನನ್ನ ತಾಯಿ ಬಹಳ ವರುಷಗಳ ಹಿಂದೆ ಸತ್ತು ಹೋಗಿದ್ದಾರೆ, 2 ನೇ ಆರೋಪಿಯನ್ನು ನೋಡಿಕೊಳ್ಳಲು ಯಾರುೂ ಇಲ್ಲದೇ ಇರುವುದರಿಂದ, ಅವರನ್ನು ನೋಡಿಕೊಳ್ಳುವ ಜವಾಬ್ದಾರಿ ನಮ್ಮ ಮೇಲೆ ಇರುತ್ತದೆ ಎಂದು ಹೇಳಿದ್ದನು ಎಂದರೆ ಸರಿಯಲ್ಲ. ನನ್ನ ಮಗಳು, 2 ನೇ ಆರೋಪಿಗೆ, ದಿನನಿತ್ಯ ಪಾಲನೆ-ಪೋಷಣೆ ಮಾಡುತ್ತಿರಲಿಲ್ಲ ಮತ್ತು ಬೈಯ್ಯುತ್ತಿದ್ದಳು ಎಂದರೆ ಸರಿಯಲ್ಲ. ಬಾಕಿ ಬರಬೇಕಾಗಿದ್ದ 50 ಸಾವಿರ ವರದಕ್ಷಿಣೆ ವಿಚಾರಕ್ಕಾಗಲಿ ಅಥವಾ ಬ್ರಾಸ್ ಲೈಟ್ ವಿಚಾರಕ್ಕಾಗಲೀ, ಆರೋಪಿಗಳ ಮನೆಯಲ್ಲಿ, ನನ್ನ ಮಗಳೊಂದಿಗೆ ಯಾವುದೇ ಗಲಾಟೆ ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿಯನ್ನು ಮನೆಯಿಂದ ಹೊರಕ್ಕೆ ಹಾಕುವುದಕ್ಕೆ, 1 ನೇ ಆರೋಪಿ, ಅವಕಾಶ ಕೊಡದೇ ಇದ್ದಾಗ, ಈ ವಿಷಯವನ್ನು ಮುಂದಿಟ್ಟುಕೊಂಡು ಸಣ್ಣ ಪುಟ್ಟ ವಿಷಯಕ್ಕೆ, ನನ್ನ ಮಗಳು ಮನಸ್ತಾಪ ಮಾಡಿಕೊಂಡು, 1 ನೇ ಆರೋಪಿಯ ಜೊತೆಯಲ್ಲಿ ಜಗಳ ಮಾಡುತ್ತಿದ್ದಳು ಎಂದರೆ ಸರಿಯಲ್ಲ. ಮಗಳನ್ನು ಕಳುಹಿಸಿಕೊಡಿ ಅಂತ ಕೇಳಿದಾಗ, ಆರೋಪಿಗಳು, ಮೊಮ್ಮಕ್ಕಳನ್ನು ಕರೆದುಕೊಂಡು ಹೋಗಿ 2 ರಿಂದ 3 ದಿನಗಳನ್ನು ಬಿಟ್ಟು, ನಿಮ್ಮ ಮಗಳನ್ನು ನಾವೇ ಕರೆದುಕೊಂಡು ಬರುತ್ತೇವೆ ಅಂತ ಹೇಳಿರಲಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ, ನೇರವಾಗಿ ನನ್ನ ಮೊಬೈಲ್ ಗೆ ಮಾತನಾಡಿರುವ ಉದಾಹರಣೆಗಳು ಇವೆ.

4) ಘಟನೆ ನಡೆದ ದಿನ, 1 ನೇ ಆರೋಪಿಯು, ನನ್ನ ಅಕ್ಕನ ಮಗನಿಗೆ, ಫೋನ್ ಮಾಡಿ, ಮಾಲಿನಿಗೆ ತುಂಬಾ ಸೀರಿಯಸ್ ಆಗಿದೆ, ನಿಮ್ಮ ಮಾವನಿಗೆ ಹೇಳಿಬಿಡಿ ಎಂದು ತಿಳಿಸಿದ್ದನು ಎಂದರೆ ಸಾಕ್ಷಿಯು, ಉಷಾರಿಲ್ಲದೇ ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದೇವೆ ಅಂತ ಹೇಳಿದ್ದರು, ಸೀರಿಯಸ್ ಆಗಿದೆ ಅಂತ ಹೇಳಿರಲಿಲ್ಲ ಎಂದು ನುಡಿಯುತ್ತಾರೆ. ನಾವು ಆಸ್ಪತ್ರೆಗೆ ಹೋದಾಗ, ಸಮಯ ಮಧ್ಯಾಹ್ನ 2.00 ಗಂಟೆ ಆಗಿರಬಹುದು. ನಾವು ಆಸ್ಪತ್ರೆಗೆ ನೋಡಲು ಹೋದಾಗ, ನನ್ನ ಮಗಳ

ಶವ, ಶವಾಗಾರದಲ್ಲಿತ್ತು. ಆಸ್ಪತ್ರೆಯ ಶವಾಗಾರವು, ಪೊಲೀಸ್ ಠಾಣೆಯ ಪಕ್ಕದಲ್ಲಿ ಇತ್ತು. ಆರೋಪಿಗಳು, ನನ್ನ ಮಗಳ ಶವದ ಬಳಿ, ಶವಾಗಾರದಲ್ಲಿ ಇರಲಿಲ್ಲ, ಪೊಲೀಸ್ ಠಾಣೆಯಲ್ಲಿ ಕುಳಿತಿದ್ದರು. ಅಲ್ಲಿಗೆ ಬಂದಿದ್ದ, 1 ನೇ ಆರೋಪಿಯ ಪಕ್ಕದ ಮನೆಯವರಾದ ಮಲ್ಲಿಕ ಎಂಬುವವರಿಗೆ ವಿಚಾರಿಸಿದೆನು. ಆಸ್ಪತ್ರೆಯಲ್ಲಿ, ಮಗಳ ಶವವನ್ನು ನೋಡಿದಾಗ, ಶವದ ಮೇಲೆ 9 ಕಡೆ ಏಟುಗಳು ಆಗಿರಲಿಲ್ಲ ಎಂದರೆ ಸರಿಯಲ್ಲ. ಮಗಳನ್ನು ಎಳೆದಾಡಿಕೊಂಡು ಹೊಡೆದಿದ್ದರಿಂದ, ಆ ರೀತಿಯ ಏಟುಗಳು, ಅವಳ ಮೈ ಮೇಲೆ ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ ರಾತ್ರಿ 9.00 ಗಂಟೆವರೆಗೆ ಇದ್ದೆನು.

5) ಅಲ್ಲಿ ತುಂಬಾ ಜನರು ಇದ್ದಿದ್ದರಿಂದ, ದೂರನ್ನು ಅವರ ಪೈಕಿ ಯಾರು ಬರೆದುಕೊಟ್ಟಿದರು ಎಂದು ಗೊತ್ತಿಲ್ಲ. ಆರೋಪಿಗಳ ಊರಿನವರಾದ ಸಿದ್ದರಾಜು ಎನ್ನುವವರು, ನಮ್ಮ ಬಳಿ ಬಂದು, ರಾಜಿ ಮಾಡಿಕೊಳ್ಳಿ, ದೂರು ಕೊಡಬೇಡ, 10 ಲಕ್ಷ ರೂ. ದುಡ್ಡು ಕೊಡಿಸುತ್ತೇವೆ ಅಂತ ಹೇಳಿ, ತಕ್ಷಣ ದೂರನ್ನು ಕೊಡುವುದಕ್ಕೆ ನಮಗೆ ಬಿಟ್ಟಿರಲಿಲ್ಲ, ನಾನು, ನನ್ನ ಮಗಳನ್ನು ಹೊಡೆದು ಸಾಯಿಸಿರುವುದರಿಂದ, ನನಗೆ ಯಾವುದೇ ಹಣ ಬೇಡ,ಕಾನೂನು ಕ್ರಮ ಏನಿದೆ, ಅದೇ ರೀತಿ ಆಗಲಿ ಅಂತ ಹೇಳಿ, ದೂರನ್ನು ರಾತ್ರಿ 9.00 ಗಂಟೆಗೆ ಕೊಟ್ಟೆವು. ಗಾಬರಿಯಲ್ಲಿ ಇದ್ದುದರಿಂದ, ದೂರಿನಲ್ಲಿ, ಮೇಲಿನ ವಿಚಾರವನ್ನು ಹೇಳಿ ಬರೆಸಲು ಆಗಲಿಲ್ಲ. 1 ಮತ್ತು 2 ನೇ ಆರೋಪಿಗಳು, ಪೊಲೀಸ್ ಠಾಣೆಯಲ್ಲಿ ಕುಳಿತಿರಲಿಲ್ಲ, ಬದಲಿಗೆ ಶವಾಗಾರದಲ್ಲಿ ನನ್ನ ಮಗಳ ಶವದ ಬಳಿಯೇ ಇದ್ದರು ಎಂದರೆ ಸರಿಯಲ್ಲ. ದೂರನ್ನು ಕೊಟ್ಟ ನಂತರ, ನಾನು ಪೊಲೀಸ್ ಠಾಣೆಗೆ ಹೋಗಿದ್ದೆನು.ಮದುವೆ ಲಗ್ನ ಪತ್ರಿಕೆ ಮತ್ತು ಫೋಟೋವನ್ನು ತೆಗೆದುಕೊಂಡು ಹೋಗಿ ಪೊಲೀಸ್ ಠಾಣೆಗೆ ಕೊಟ್ಟಿದ್ದೆನು, ಯಾವಾಗ ಕೊಟ್ಟಿದ್ದೆನು ಅಂತ ನೆನಪಿಲ್ಲ. ಪೊಲೀಸರು ನನ್ನ ಮುಂದೆ ಯಾವುದೇ ಬರವಣಿಗೆಯನ್ನು ಮಾಡಲಿಲ್ಲ. ನನ್ನ ಮಗಳು, ತಿಂಗಳು ಪೀರಿಯಡ್ಸ್ ಕಾಯಿಲೆಯಿಂದ ಬಳಲುತ್ತಿದ್ದು, ಅವಳಿಗೆ ಮೈಸೂರು ಜೆ ಎಸ್ ಎಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ, ಚಿಕಿತ್ಸೆ ಕೊಡಿಸುತ್ತಿದ್ದೆನು ಎಂದರೆ ಸರಿಯಲ್ಲ. ನನಗೆ ಒಬ್ಬಳೇ ಮಗಳು ಆಗಿದ್ದರಿಂದ, ಬಹಳ ಮುದ್ದಾಗಿ ಸಾಕಿದ್ದೆನು ಎಂದರೆ ಸಾಕ್ಷಿಯು, ಚೆನ್ನಾಗಿ ಸಂಸ್ಕಾರದಿಂದ ಗಂಡನ ಮನೆಯಲ್ಲಿ ಬಾಳುವಂತೆ ಸಾಕಿದ್ದೆನು ಎಂದು ನುಡಿಯುತ್ತಾರೆ. ಸಣ್ಣ ಪುಟ್ಟ ವಿಚಾರಗಳಿಗೆ, ನನ್ನ ಮಗಳೇ, 1 ನೇ ಆರೋಪಿಯೊಂದಿಗೆ ಮುನಿಸಿಕೊಂಡು ಗಲಾಟೆ ಮಾಡುತ್ತಿದ್ದಳು ಎಂದರೆ ಸರಿಯಲ್ಲ. ಆದ್ದರಿಂದ, ನನ್ನ ಮಗಳೇ, ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಳು ಎಂದರೆ ಸರಿಯಲ್ಲ. ನನ್ನ ಮಗಳಿಗೆ, ಆರೋಪಿಗಳು, ಯಾವುದೇ ಕಿರುಕುಳವನ್ನು ಕೊಟ್ಟಿರಲಿಲ್ಲ ಮತ್ತು ಹೆಚ್ಚಿನ ವರದಕ್ಷಿಣೆ

ತರುವಂತೆ ಒತ್ತಾಯ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗಳಿಗೆ ತೊಂದರೆಯಾಗಲೀ ಎಂದು ದುರುದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u> ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.